ಸಂಯುಕ್ತ ಕರ್ನಾಟಕ

Online Newspaper Clipping Service

Dtd-Tuesday, 14th, July- 2020

Page No.03


# ಡಿಸಿ–ಎಸ್ಪಿ ಸಂಬಂಧ ಸುಧಾರಣೆ ಯತ್ನ

## ಉಸ್ತುವಾರಿ ಸಚಿವ ನಾಗೇಶ್ ಘೋಷಣೆ

ಸಂ.ಕ ಸಮಾಚಾರ, ಕೋಲಾರ

ಜಿಲ್ಲೆಯ ಆಡಳಿತದಲ್ಲಿ ಜಿಲ್ಲಾಧಿಕಾರಿ, ಜಿಲ್ಲಾ ರಕ್ಷಣಾಧಿಕಾರಿ ಮತ್ತು ಜಿ.ಪಂ ಸಿಇಒ ತ್ರಿಮೂರ್ತಿಗಳಿದ್ದಂತೆ. ಆದರೆ ಇವರುಗಳ ಮಧ್ಯೆ ಸಮನ್ವಯ ಇಲ್ಲ ಎಂಬುದು ಈಗ ನನ್ನ ಗಮನಕ್ಕೆ ಬಂದಿದೆ. ಸಧ್ಯದಲ್ಲೇ ಇವರೆಲ್ಲರ ಸಭೆ ಕರೆದು ಪರಸ್ಪರ ಹೊಂದಿಕೊಂಡು ಕೆಲಸ ಮಾಡುವಂತೆ ತಾಕೀತು ಮಾಡುವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ನಾಗೇಶ್ ಹೇಳಿದರು.

ಸೋಮವಾರ ಸಂಜೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಮುಖ್ಯಮಂತ್ರಿ ಜೊತೆ ವಿಡಿಯೋ ಕಾನ್ಫರೆನ್ಸ್ ಮುಗಿಸಿದ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು ಹಿರಿಯ ಅಧಿಕಾರಿಗಳ ನಡುವಿನ ಹೊಂದಾಣಿಕೆ ಕೊರತೆ ಇದುವರೆಗೆ ನನ್ನ ಗಮನಕ್ಕೆ ಬಂದಿಲ್ಲ ಎಂದು ತಿಳಿಸಿದರು.



ಕಾನೂನು ಸುವ್ಯವಸ್ಥೆ ವಿಚಾರದಲ್ಲಿ ಜಿಲ್ಲಾಧಿಕಾರಿ ನೀಡುವ ನಿರ್ದೇಶನವನ್ನು ಜಿಲ್ಲಾ ರಕ್ಷಣಾಧಿಕಾರಿಗಳಬ್ಬರೂ ಪಾಲಿಸಬೇಕು. ಇವರೆಲ್ಲರ ಮನಸ್ಸಿನಲ್ಲಿ ಏನಿದೆ ಎಂಬುದನ್ನು ತಿಳಿದುಕೊಳ್ಳುವೆ. ಇವರೆಲ್ಲರ ನಡುವೆ ಹೊಂದಾಣಿಕೆ ಇಲ್ಲದಿರುವುದು ಜಿಲ್ಲೆಗೆ ಲಕ್ಷಣವಲ್ಲ. ಎಲ್ಲರ ಸಭೆ ಕರೆದು ಮಾತನಾಡುತ್ತೇನೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬಂಗಾರಪೇಟೆ ತಹಸೀಲ್ದಾರ್ ಚಂದ್ರಮೌಳೇಶ್ವರ ಕೊಲೆಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಹಾಗೂ ಕೆಜಿಎಫ್ ಎಸ್‌ಪಿ ಜತೆ ಮಾತನಾಡುವೆ ಎಂದು ಹೇಳಿದರು.

### ಜಾಲಪ್ಪ ಆಸ್ಪತ್ರೆಗೆ ಎಚ್ಚರಿಕೆ

ಕೋಲಾರದ ಜಾಲಪ್ಪ, ಎಸ್‌ಎನ್‌ಆರ್ ಮತ್ತು ಕೆಜಿಎಫ್ ಸಂಭ್ರಮ್ ಆಸ್ಪತ್ರೆಯಲ್ಲಿ ಒಟ್ಟು 1610 ಹಾಸಿಗೆಗಳಿದೆ, ಯಾವುದೇ ಪರಿಸ್ಥಿತಿ ಎದುರಿಸಲು ಇದನ್ನು 4 ಸಾವಿರ ಹಾಸಿಗೆಗೆ ವಿಸ್ತರಿಸಲಾಗುವುದು ಎಂದು ತಿಳಿಸಿದರು.

ಕೋವಿಡ್‌ಗೆ ಸಂಬಂಧಿಸಿದಂತೆ ಜಾಲಪ್ಪ ಆಸ್ಪತ್ರೆಯ ನಿರ್ವಹಣೆ ಸಮಾಧಾನಕರವಾಗಿಲ್ಲ. ಕೂಡಲೇ ಅವರು ಸರಿಪಡಿಸಿಕೊಳ್ಳದಿದ್ದರೆ ನೋಟೀಸು ನೀಡಿ ಕ್ರಮ ಕೈಗೊಳ್ಳಲಾಗುವುದು ಎಂದು ಅಬಕಾರಿ ಸಚಿವ ಎಚ್.ನಾಗೇಶ್ ಎಚ್ಚರಿಸಿದರು.

ಇದುವರೆಗೆ ಜಿಲ್ಲೆಯಲ್ಲಿ ಸಾವನ್ನಪ್ಪಿರುವ ಎಲ್ಲ 4 ಕೋವಿಡ್ ಪ್ರಕರಣಗಳು ಜಾಲಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿವೆ. ಎಸ್‌ಎನ್‌ಆರ್ ಆಸ್ಪತ್ರೆಯಲ್ಲಿ ಒಂದೇಒಂದು ಸಾವು ಸಂಭವಿಸಿಲ್ಲ. ಖಾಸಗಿ ಆಸ್ಪತ್ರೆಯ ಕಳಪೆ ನಿರ್ವಹಣೆಗೆ ಇದೇ ಸಾಕ್ಷಿ ಎಂದು ಅವರು ಟೀಕಿಸಿದರು.

ಜಾಲಪ್ಪ ಆಸ್ಪತ್ರೆ ಲೋಪದೋಷಗಳ ಕುರಿತು ಸೋಮವಾರ ನಡೆದ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಮುಖ್ಯಮಂತ್ರಿ ಗಮನಕ್ಕೆ ತರಲಾಗಿದೆ. ಮುಂದಾದರು ಸಮರ್ಪಕ ಚಿಕಿತ್ಸೆಗೆ ವ್ಯವಸ್ಥೆ ಮಾಡದಿದ್ದಲ್ಲಿ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

### ಲೋಡೆಡ್ ಗನ್ ರಕ್ಷಣೆ

ತಹಸೀಲ್ದಾರ್‌ರಂತಹ ಅಧಿಕಾರಿಗಳಿಗೆ ರಕ್ಷಣೆ ನೀಡದಿದ್ದರೆ ಅವರು ಕೆಲಸ ಮಾಡುವುದಾದರೂ ಹೇಗೆ. ಇನ್ನು ಮುಂದೆ ಸಿವಿಲ್ ಕೇಸುಗಳಿಗೆ ಸಂಬಂಧಿಸಿದಂತೆ ಸರ್ವೆ ಕಾರ್ಯಕ್ಕೆ ಹೋದರೆ ಲೋಡೆಡ್ ಗನ್ ಇರುವ ಪೊಲೀಸ್ ರಕ್ಷಣೆ ಕೊಡಿ. ಅಲ್ಲಿ ಏನಾದರೂ ಅನಾಹುತ ಆದರೆ ಮುಲಾಜಿಲ್ಲದೆ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ ಎಂದು ನಾಗೇಶ್ ನುಡಿದರು.

ಅಧಿಕಾರಿಗಳ ಜೀವ ಉಳಿಸಬೇಕಲ್ಲ. ಸಾರ್ವಜನಿಕರ ಸೇವೆಗಾಗಿ ತಹಸೀಲ್ದಾರ್, ರೆವಿನ್ಯೂ ಇನ್ಸ್‌ಪೆಕ್ಟರ್, ಎಸಿ, ಡಿಸಿ ಹೋದರೆ ಅವರನ್ನೇ ಸಾಯಿಸಿದರೆ ಹೇಗೆ? ಅಧಿಕಾರಿಗಳಿಗೆ ಪ್ರಾಣಭಯ ತಪ್ಪಿಸಲು ಅವರೊಂದಿಗೆ ಗನ್‌ಮ್ಯಾನ್ ಕಳುಹಿಸಿ ಎಂದು ಸೂಚಿಸಲಾಗಿದೆ ಎಂದು ನಾಗೇಶ್ ಹೇಳಿದರು.

### ಕೋಲಾರ ಲಾಕ್‌ಡೌನ್ ಇಲ್ಲ

ಬೇರೆ ಜಿಲ್ಲೆಗಳಷ್ಟು ನಮ್ಮಲ್ಲಿ ಪರಿಸ್ಥಿತಿ ಗಂಭೀರವಾಗಿಲ್ಲ. ಹಾಗಾಗಿ ಕೋಲಾರ ಜಿಲ್ಲೆಯಲ್ಲಿ ಲಾಕ್‌ಡೌನ್ ಮಾಡುವುದಿಲ್ಲ ಎಂದು ಸಚಿವ ನಾಗೇಶ್ ಸ್ಪಷ್ಟಪಡಿಸಿದರು.

ಬೆಂಗಳೂರು ಲಾಕ್‌ಡೌನ್‌ನಿಂದಾಗಿ ಆ ಭಾಗದ ಜನರು ನಮ್ಮಲ್ಲಿಗೆ ಬಾರದಂತೆ ಕೋಲಾರದ ಗಡಿಯಲ್ಲಿ ಚೆಕ್‌ಪೋಸ್ಟ್ ಆರಂಭಕ್ಕೆ ನಿರ್ಧರಿಸಲಾಗಿದೆ. ನಮ್ಮ ಗಡಿ ದಾಟಲು ಅಸ್ಪದ ನೀಡುವುದಿಲ್ಲ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ದಿನಕ್ಕೆ 10–12 ಪಾಸಿಟೀವ್ ಕೇಸುಗಳು ಬರುತ್ತಿವೆ. ಬೆಂಗಳೂರು ಮತ್ತಿತರ ಕಡೆ ಸಾವಿರಾರು ಬಂದಿವೆ. ನಮ್ಮಲ್ಲಿ ಇದೀಗ 170 ಮಂದಿ ಮಾತ್ರ ಆಸ್ಪತ್ರೆಯಲ್ಲಿದ್ದಾರೆ ಎಂದು ನುಡಿದರು.